# ಪ್ರತಿನಿಧಿ ಪ್ರಬಂಧ ವಿಷಯ: ಮಾಧ್ಯಮಕ್ಷೇತ್ರದಲ್ಲಿಕ ನ್ನಡಸಾಹಿತ್ಯಪತ್ರಿಕೆಗಳು

**ಕೃ.ಪ. ಗಣೇಶ**
ಕನ್ನಡ ಸಹಾಯಕ ಪ್ರಾಧ್ಯಾಪಕ, ಮುಖ್ಯಸ್ಥರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಗ್ಗಡದೇವನಕೋಟೆ

**OPEN ACCESS**

Volume: 12

Special Issue: 1

Month: October

Year: 2024

E-ISSN: 2582-0397

P-ISSN: 2321-788X

Impact Factor: 3.025

Citation:
ಗಣ ೇಶಕೃ.ಪ. "ಪರತಿನಿಧಿ ಪರಬಂಧ ವಿಷಯ: ಮಾಧಯ ಮಕಷ ೇತರದಲಲಿ ಕನನಡಸಾಹಿತಯಪ ತರಿಕೆಗಳು." *Shanlax International Journal of Arts, Science and Humanities,* vol. 12, no. S1, 2024, pp. 215–18.

DOI:
https://doi.org/10.34293/sijash.v12iS1-Oct.8307

1450ರಲ್ಲಿ ಮುದ್ರಣ ಯಂತ್ರದ ಜನಕ ಗುಟನ್ ಬರ್ಗ್ ವಿಶ್ವದ ಮೊತ್ತಮೊದಲ ಮುದ್ರಣಾಲಯ ಸ್ಥಾಪಿಸುವುದರೊಂದಿಗೆ ಪತ್ರಿಕೋದ್ಯಮದ ಹೊಸ ಶಕೆ ಆರಂಭವಾಯಿತು. ದೇವರು, ಆಧ್ಯಾತ್ಮ ಚಿಂತನೆ ಮತ್ತು ಧರ್ಮ ಪ್ರಸಾರದ ಸಾಹಿತ್ಯವು ಆರಂಭದ ಪತ್ರಿಕೆಗಳ ಒಡಲನ್ನು ತುಂಬುತ್ತಿದ್ದವು. 18ನೇ ಶತಮಾನದ ಹೊತ್ತಿಗೆ ಪತ್ರಿಕೆಗಳು ಧಾರ್ಮಿಕ ಸಾಹಿತ್ಯದಿಂದ ಸೃಜನಶೀಲ ಸಾಹಿತ್ಯದತ್ತ ತಮ್ಮ ಮಗ್ಗಲನ್ನ ಬದಲಿಸಿಕೊಂಡವು. ದಿನಪತ್ರಿಕೆಗಳಲ್ಲಿ ಸುದ್ದಿ-ಸಮಾಚಾರಗಳೊಂದಿಗೆ ಸಾಹಿತ್ಯ ಸಾಪ್ತಾಹಿಕಪುರವಣಿಗಳು ಕಾಣಿಸಿಕೊಂಡವು. ಭಾರತದಲ್ಲಿ ಪತ್ರಿಕೋದ್ಯಮದ ಶಕೆ ಆರಂಭವಾದದ್ದೇ ನಿಯತಕಾಲಿಕಗಳಿಂದ. ಭಾರತದ ಮೊದಲ ಪತ್ರಿಕೆ ಬೆಂಗಾಲ್‌ಗೆಜೆಟ್ 1780ರಲ್ಲಿ ಜೇಮ್ಸ್ ಅಗಸ್ಟಿಸ್ ಸಂಪಾದಕತ್ವದಲ್ಲಿ ಹಾಗೆಯೇ ಕನ್ನಡದಲ್ಲಿ1 ಜುಲೈ 1843ರಲ್ಲಿ ಮಂಗಳೂರು ಸಮಾಚಾರ್ ಆರಂಭವಾಯಿತು.

ಕವಿಚಕ್ರವರ್ತಿ ರನ್ನ ಹೇಳುವಂತೆ ಕಟ್ಟಿಯುಮೇನೋ ಮಾಲೆಗಾರನ ಪೊಸ ಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗದೆ? ಎಂಬಂತೆ ಸಾಹಿತ್ಯವು ಸಹೃದಯರಿಗೆ ತಲುಪದೆ ಇದ್ದರೆ ಕವಿಯ ಪ್ರಯತ್ನ ವ್ಯರ್ಥವಾದಂತೆ.ಪತ್ರಿಕೆ ಮತ್ತು ಭಾಷೆ ಒಂದೇ ನಾಣ್ಯದ ಎರಡು ಮುಖ. ಭಾಷೆಯ ಸೃಜನಶೀಲ ಭಾಗವೇ ಸಾಹಿತ್ಯ. ಸಾಹಿತ್ಯದ ಅಭಿವ್ಯಕ್ತಿಗೆ ಪತ್ರಿಕೆ ಒಂದು ಮಾಧ್ಯಮ. ಕೊಡುಕೊಳ್ಳುವಿಕೆಯಿಂದ ಎರಡೂ ಕ್ಷೇತ್ರಗಳೂ ಬೆಳೆಯುತ್ತಿವೆ. ಇವೆರಡರ ನಡುವೆ ಅವಿನಾಭಾವ ಸಂಬಂಧವಿದೆ.ಕನ್ನಡ ಪತ್ರಿಕೋದ್ಯಮ ಇತಿಹಾಸದಲ್ಲಿ ಸಾಹಿತ್ಯ ಪತ್ರಿಕೆಗಳ ಪಾತ್ರ ಹಿರಿದಾದು; ಅಷ್ಟೇ ಅಲ್ಲ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತಮ್ಮದೇಆದ ಮೈಲಿಗಲ್ಲನ್ನ ಸ್ಥಾಪಿಸಿ,ಕನ್ನಡ ಸಾಹಿತ್ಯ ಚ-ರಿತ್ರೆಯೊಂದಿಗೆಬೆರೆತುಹೋಗಿದೆ.

**ಕನ್ನಡ ಸಾಹಿತ್ಯ ಪತ್ರಿಕೋದ್ಯಮವನ್ನು ಅಧ್ಯಯನಕ್ಕಾಗಿ ಈ ರೀತಿ ಗುರುತಿಸಿಕೊಳ್ಳಬಹುದು.**

1. ಶೈಶವಾವಸ್ಥೆ- ಪ್ರಯೋಗಗಳ ಕಾಲ - 1843 ರಿಂದ 1900
2. ಸ್ವಾತಂತ್ರ್ಯ ಪೂರ್ವ ಪತ್ರಿಕೋದ್ಯಮ- ಅಭಿವೃದ್ಧಿ ಪಥ - 1900 ರಿಂದ 1947
3. ಸ್ವಾತಂತ್ರ್ಯೋತ್ತರ ಕನ್ನಡ ಪತ್ರಿಕೋದ್ಯಮ- 1947 ರಿಂದ 2015

ಕನ್ನಡ ಪತ್ರಿಕೋದ್ಯದ ಇತಿಹಾಸದಲ್ಲಿ ಸಾಹಿತ್ಯ ಪತ್ರಿಕೆಗಳು ತಮ್ಮದೇ ಆದ ವಿಶಿಷ್ಠ ಛಾಪನ್ನು ಒತ್ತಿವೆ. ಅಷ್ಟೇ ಅಲ್ಲ ಸಾಹಿತ್ಯ ಚರಿತ್ರೆಯಲ್ಲೂ ತಮ್ಮ ಹೆಜ್ಜೆ ಗುರುತನ್ನು ಮೂಡಿಸಿವೆ. ಸೃಜನಶೀಲ, ಸೋಪಜ್ಞತೆ, ಹೊಸ ಅಲೆಯ ಸಾಹಿತ್ಯಕ್ಕೆ ಸೂಕ್ತ ವೇದಿಕೆ ನಿರ್ಮಿಸಿತು.ಜೊತೆ ಜೊತೆಗೆ ವಿಮರ್ಶೆ ಮತ್ತು ಸಂಶೋಧನೆಗಳನ್ನು ಬೆಳೆಸಿದ ಕೀರ್ತಿ ಈ ಸಾಹಿತ್ಯ ಪತ್ರಿಕೆಗಳಿಗೆ ಸಲ್ಲುತ್ತವೆ. ನವೋದಯ, ನವ್ಯ, ಪ್ರಗತಿಶೀಲ, ಬಂಡಾಯ, ಬಂಡಾಯೋತ್ತರ, ಸ್ತ್ರೀವಾದಿ, ಐಟಿ & ಬಿಟಿ ಮಂದಿಯ ಸಾಹಿತ್ಯ, ಹೀಗೆ ಸಾಹಿತ್ಯ ಚರಿತ್ರೆಯ ಉದ್ದಕ್ಕೂ ಸಾಹಿತ್ಯ ಪತ್ರಿಕೆಗಳು ಜೀವಧಾರೆಯಾಗಿ ಹರಿದಿವೆ. ಹೊಸತಲೆಮಾರುಗಳನ್ನು ಸೃಷ್ಟಿಸುತ್ತಾ, ಹೊಸ ಸಂವೇದನೆಗಳನ್ನು ಗುರುತಿಸುತ್ತಾ ಮತ್ತು ಓದುಗರ ಅಭಿರುಚಿಯ ಮಟ್ಟವನ್ನು ಏತ್ತರಿಸಿದ ಕೀರ್ತಿಯ ಜೊತೆಗೆ ನಾಡು-ನುಡಿಯ ದಾಖಲೆಗಳಾಗಿ ಸೇವೆ ಸಲ್ಲಿಸಿವೆ.

ಸಾಹಿತ್ಯ ಪತ್ರಿಕೆಗಳು ಮುಖ್ಯ ವಾಹಿನಿಯ ಪತ್ರಿಕೆಗಳಿಗಿಂತ ಭಿನ್ನ ಮತ್ತು ಮಹತ್ವಪೂರ್ಣವಾದುದು. ಸ್ಥೂಲವಾಗಿ ಈ ರೀತಿ ವಿಂಗಡಿಸಿಕೊಳ್ಳಬಹುದು.19ನೇ ಶತಮಾನದ ಕೊನೆಯ ದಶಕದಿಂದಆಯ್ದ ಕನ್ನಡ ಸಾಹಿತ್ಯ ಪತ್ರಿಕೆಗಳಹೆಜ್ಜೆ ಗುರುತುಗಳನ್ನು ಗುರುತಿಸಬಹುದು.

1. ಹಳೆ ಮೈಸೂರು ಪ್ರಾಂತ್ಯ:- ಕರ್ನಾಟಕ ಕಾವ್ಯ ಮಂಜರಿ, ಪ್ರಬುದ್ಧ ಕರ್ನಾಟಕ, ಕನ್ನಡ ಸಾಹಿತ್ಯ ಪರಿಷ್ಪತ್ರಿಕೆ, ಸಾಕ್ಷಿ, ಇತ್ಯಾದಿ
2. ಉತ್ತರ ಕರ್ನಾಟಕ ಪ್ರಾಂತ್ಯ:- ವಾಗ್ಭೂಷಣ, ಜಯಂತಿ, ಸಂಕ್ರಮಣ, ಇತ್ಯಾದಿ
3. ಇತರೆ

**ಕರ್ನಾಟಕ ಕಾವ್ಯ ಮಂಜರಿ**

1892ರಲ್ಲಿ ಎಂ.ಎ. ರಾಮಾನುಜ ಅಯ್ಯಂಗಾರ್ ಮತ್ತು ಎಸ್.ಜಿ. ನರಸಿಂಹಚಾರ್ ಸಂಪಾದಕತ್ವದಲ್ಲಿ ಬೆಂಗಳೂರಿನಿಂದ ಆರಂಭವಾಯಿತು. ಉದ್ದೇಶ:- ಕನ್ನಡದದ ಪ್ರಾಚೀನ ಸಾಹಿತ್ಯವನ್ನು ಶ್ರೀಸಾಮಾನ್ಯರಿಗೆ ಪರಿಚಯಿಸುವುದು. ನಾನಾ ವಿಧದ ಪ್ರಾಚೀನ ಕಾವ್ಯ, ನಾಟಕ, ಛಂಧೋಲಂಕಾರ, ವ್ಯಾಕರಣ, ನಿಘಂಟು, ವೈದ್ಯ, ಸ್ತೂಪಶಿಲ್ಪ ಗ್ರಂಥಗಳ ಸಂಗ್ರಹದ ಮಾಸ ಪತ್ರಿಕೆ ಎಂದು ಅಭಿದಾನ ನೀಡಿದರು. ಒಂದೊಂದು ಪ್ರಾಚೀನ ಕಾವ್ಯ ಪ್ರಕಟಗೊಂಡಾಗಲೂ ಮುಂಬಯಿ, ಮದ್ರಾಸ್, ಮೈಸೂರು ಪ್ರಾಂತಗಳ ಕನ್ನಡ ಪಂಡಿತ ಪರೀಕ್ಷೆಗಳಿಗೆ ಪಠ್ಯ ಪುಸ್ತಕಗಳಾದವು.

ಕರ್ನಾಟಕ ಕಾವ್ಯ ಕಲಾನಿಧಿ:-1896ರಲ್ಲಿ ಆರಂಭವಾದ ಈ ಪತ್ರಿಕೆ ಸುಮಾರು 25ವರ್ಷ ನಡೆಯಿತು. ಈ ಸಾಹಿತ್ಯ ಪತ್ರಿಕೆಯು ಮುಖ್ಯವಾಗಿ ಪ್ರಾಚೀನ ಕನ್ನಡ ಕಾವ್ಯದ ಅಭ್ಯಾಸಿಗಳಿಗೆ ಆಕರವಾಗಿತ್ತು. ಮುದ್ದಣನ ರಾಮಾಶ್ವಮೇಧ ಕಾವ್ಯ ಮೊದಲು ಪ್ರಕಟಗೊಂಡಿತು. ನಂದಳಿಕೆ ಲಕ್ಷ್ಮಿ ನಾರಾಣಪ್ಪನನ್ನು ಮುದ್ದಣ್ಣ ನನ್ನಾಗಿ ಜನಪ್ರಿಯವಾಗುವಂತೆ ಮಾಡಿತು. 1986ರಲ್ಲಿ ಧಾರವಾಡ ವಿದ್ಯಾವರ್ಧಕ ಸಂಘದಿಂದ ವಾಗ್ಭೋಷಣ ಪತ್ರಿಕೆ ಬಂದಿತು.

ಕನ್ನಡ ಸಾಹಿತ್ಯ ಪರಿಷ್ಪತ್ರಿಕೆ:-1916ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕನ್ನಡ ಸಾಹಿತ್ಯ ಪರಿಷ್ಪತ್ರಿಕೆಯು ಬೆಳ್ಳಾವೆ ವೆಂಕಟಪ್ಪ ನಾರಾಣಪ್ಪ, ಎಂ.ಆರ್. ಶ್ರೀನಿವಾಸಮೂರ್ತಿ ಮತ್ತು ಡಿ.ಎಲ್. ನರಸಿಂಹಚಾರ್ ಸಂಪಾದತ್ವದಲ್ಲಿ ಬಂತು. ಉದ್ದೇಶ:- ಕನ್ನಡ ನಾಡು-ನುಡಿ ಸಂಸ್ಕೃತಿಗಳ ಪುನರುಜ್ಜೀವನ, ಏಕೀಕರಣ, ಸಾಹಿತ್ಯದ ವಿದ್ವತ್-ಪ್ರೌಢಿಮೆಯ ಲೇಖನ ಪ್ರಸಾರ-ಪ್ರಕಟಣೆ.

**ನವೋದಯದ ರೂವಾರಿಗಳು**

ಮೈಸೂರಿನಿಂದ - ಪ್ರಬುದ್ಧ ಕರ್ನಾಟಕಮತ್ತುಧಾರವಾಡದಿಂದ - ಜಯಂತಿ ಸಾಹಿತ್ಯ ಪತ್ರಿಕೆಗಳು ನವೋದಯದ ರೂವಾರಿಗಳೆಂದು ಗುರುತಿಸುತ್ತಾರೆ.

ಪ್ರಬುದ್ಧ ಕರ್ನಾಟಕ - 1919ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘದಿಂದ ಎ.ಆರ್. ಕೃಷ್ಣ ಶಾಸ್ತ್ರಿಗಳ ಸಂಪಾದಕತ್ವದಲ್ಲಿ ಹೊರಬಂತು. ಪ್ರಬುದ್ಧ ಕರ್ನಾಟಕ ಎಂದರೆ ಕನ್ನಡದ ಪ್ರಬುದ್ಧ ಮನಸ್ಸುಗಳ ಸಂಕೇತ. ಇದು ಅಪ್ಪಟ ಸಾಹಿತ್ಯ ಪತ್ರಿಕೆ.

ಎ.ಆರ್. ಕೃಷ್ಣಶಾಸ್ತ್ರಿಗಳು ತಮ್ಮ ನೂರು ಮಂದಿ ಶಿಷ್ಯರಿಂದ ತಲಾ ಒಂದು ರೂಪಾಯಿ ಚಂದಾ ಎತ್ತಿ ಮೊದಲ ಸಂಚಿಕೆಯನ್ನು ಹೊರತರುತ್ತಾರೆ. ಸಂಕ್ರಾಂತಿ, ದೀಪಾವಳಿ ಮತ್ತು ಯುಗಾದಿಯ ಸಂದರ್ಭದಲ್ಲಿ ವಿಶೇಷ ಸಂಚಿಕೆಯನ್ನ ಪ್ರಕಟಿಸಿತು. ಕಾವ್ಯ ಸೃಷ್ಟಿಗೆ ಬೇಕಾದ ಸಾಮಾಗ್ರಿಗಳನ್ನು ಒದಗಿಸಿಕೊಡುವುದು. ಒಂದು ಕಡೆ ವಿಮರ್ಶೆಯನ್ನೂ ಮತ್ತೊಂದು ಕಡೆ ಸಂಶೋಧನೆಯನ್ನು ಬೆಳೆಸುವುದು ಎನ್ನುವ ಸ್ಪಷ್ಟ ಪರಿಕಲ್ಪನೆಯಿಂದ 16ವರ್ಷ ಪತ್ರಿಕೆ ನಡೆಯಿತು.ಹಣಕಾಸಿನ ಮುಗ್ಗಟ್ಟು ಎದುರಾದಾಗ ಆಚಾರ್ಯ ಬಿ.ಎಂ.ಶ್ರೀ ಅವರು ನೆರವಿಗೆ ಧಾವಿಸಿ ಬಂದು 1932ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಪ್ರಬುದ್ಧ ಕರ್ನಾಟಕವನ್ನು ವಹಿಸಿಕೊಂಡಿತು.

ಪತ್ರಿಕೆಗೆ 25 ವರ್ಷ ತುಂಬಿದಾಗ ಎ.ಆರ್.ಕೆ. ಹೀಗೆ ಬರೆಯುತ್ತಾರೆ. ಹೊಸಗನ್ನಡ ಸಾಹಿತ್ಯದಲ್ಲಿ ಎಷ್ಟೋ ಉತ್ತಮ ವ್ಯವಸಾಯ ನಡೆದಿದೆ. ಪ್ರಬುದ್ಧ ಕರ್ನಾಟಕವು ಅದು ನಡೆಯುವಂತೆ ಸ್ವಲ್ಪವಾದರೂ ಸಾಧನವಾಗಿ ಕಾಡು ಕಡಿದು ಭೂಮಿಯನ್ನು ಉತ್ತು, ನೆಲ ಹದ ಮಾಡಿ, ಬೇಲಿ ಹಾಕಿ ಅಷ್ಟೋ ಇಷ್ಟೋ ನೀರು ಬೀಜ ಗೊಬ್ಬರಗಳನ್ನು ಒದಗಿಸಿಕೊಟ್ಟಿದೆ ಎಂದು ನಂಬಿದ್ದೇನೆ .

ಪ್ರಬುದ್ಧ ಕರ್ನಾಟಕವು ಎ.ಆರ್.ಕೃಷ್ಣಶಾಸ್ತ್ರಿಗಳಲ್ಲದೆ ಕನ್ನಡದ ಹೆಸರಾಂತ ಸಾಹಿತಿಗಳಾದ ಬಿ.ಎಂ.ಶ್ರೀ., ಟಿ.ಎಸ್.ವೆಂಕಣ್ಣಯ್ಯ , ವಿ.ಸೀ., ಕುವೆಂಪು, ಡಿ.ಎಲ್.ಎನ್., ಹಮಾನಾ, ಕ.ವೆಂ. ರಾಘವಾಚಾರ್, ಎನ್. ಅನಂತರಂಗಾಚಾರ್, ಎಸ್.ವಿ. ಪರಮೇಶ್ವರ ಭಟ್ಟರ ಜೊತೆಗೆ ನವ್ಯ ತಲೆಮಾರಿನ ಜಿ.ಎಚ್. ನಾಯಕ್ ಸಂಪಾದಕತ್ವದ ಸಾರಥ್ಯದ ಪರಂಪರೆಯನ್ನು ಸಮರ್ಥವಾಗಿ ಮುನ್ನೆಡಿಸಿದರು. ಕಲಾನಂತರದಲ್ಲಿ ಮಾನವಿಕ ಕರ್ನಾಟಕ ಮತ್ತು ವಿಜ್ಞಾನ ಕರ್ನಾಟಕ ಎರಡು ಕವಲುಗಳಾಯಿತು. ನವೋದಯ ಕಾಲಘಟ್ಟದಲ್ಲಿ ಅನೇಕ ಲೇಖಕರಿಗೆ ಮತ್ತು ವಿದ್ವಾಂಸರಿಗೆ ವೇದಿಕೆಯಾಗಿದ್ದ ಪ್ರಬುದ್ಧ ಕರ್ನಾಟಕವುಕನ್ನಡ ಸಾಹಿತ್ಯ ಪತ್ರಿಕೆಗಳ ಇತಿಹಾಸದಲ್ಲಿ ಮೈಲಿಗಲ್ಲಾಗಿದೆ.

ಜಯಂತಿ - 1938ರಲ್ಲಿ ಧಾರವಾಡದ ಗೆಳೆಯರ ಬಳಗದ ಪ್ರಯೋಗದ ಕೂಸು ಜಯಂತಿಸಾಹಿತ್ಯ ಪತ್ರಿಕೆ. ಉತ್ತರ ಕರ್ನಾಟಕದ ಪ್ರತಿಭೆಗಳಿಗೆ ಸೂಕ್ತ ವೇದಿಕೆಯಾಯಿತು. ಆರಂಭದ ಸಂಪಾದಕರಾಗಿ ಶಂಭಾ ಜೋಶಿ ನಂತರದಲ್ಲಿ ಬೆಟಗೇರಿ ಕೃಷ್ಣಶರ್ಮ ನಡೆಸಿದರು. ರಸಭರಿತ ಕಥೆ ಮತ್ತು ಕಾವ್ಯಗಳೊಂದಿಗೆ ವಿಚಾರಪೂರಿತ ಲೇಖನಗಳು ಪ್ರಕಟವಾದವು.

ಜಯಂತಿಯು 20ನೇ ಶತಮಾನದ ಕನ್ನಡ ಸಾಹಿತ್ಯ ಬೆಳವಣಿಗೆಯ ಪ್ರಮುಖ ಘಟ್ಟಗಳನ್ನು ಬಿಂಬಿಸುವಂತಹ ದಾಖಲೆಯಾಗಿದೆ. ಮೂವತ್ತರ ದಶಕದ ನವೋದಯದಿಂದ ಆರಂಭವಾಗಿ ಪ್ರಗತಿಶೀಲ ಸಾಹಿತ್ಯ ಚಳವಳಿ ಹಾಗೂ ನವ್ಯ ಸಾಹಿತ್ಯದವರೆಗಿನ ಕೈಗನ್ನಡಿಯಾಯಿತು. ಜಯಂತಿಸಾಹಿತ್ಯ ಪತ್ರಿಕೆ ಆರ್ಥಿಕ ಮುಗ್ಗಟ್ಟಿಗೆ ಒಳಗಾದಾಗ ಬೆಟಗೇರಿಯವರು ಹೀಗೆ ಹೇಳಿಕೊಂಡಿದ್ದಾರೆ. ನಮ್ಮ ಮನೆಯಲ್ಲಿ ಇಬ್ಬರು ಕ್ಷಯರೋಗಿಗಳು. ಒಬ್ಬಳು ಹೆಂಡತಿ ಇನ್ನೊಬ್ಬಳು ಜಯಂತಿ

ಈ ಜಯಂತಿ ಸಾಹಿತ್ಯ ಪತ್ರಿಕೆಯ ಪಥದಲ್ಲಿ ದ.ರಾ.ಬೇಂದ್ರೆ, ಶಿವರಾಮಕಾರಂತ, ಗೌರೀಶ್ ಕಾಯ್ಕಿಣಿ, ಅ.ನ.ಕೃ., ಗೋಪಾಲಕೃಷ್ಣ ಅಡಿಗ ಹೀಗೆ ಕನ್ನಡದ ಮಹಾನ್ ದಿಗ್ಗಜರು ತಮ್ಮ ಹೆಜ್ಜೆಗಳನ್ನು ಸವೆಸಿದ್ದಾರೆ. ನವ್ಯ ಸಾಹಿತ್ಯದ ಮಹತ್ವದ ಲೇಖಕರಾದ ಡಾ. ಶಾಂತಿನಾಥ ದೇಸಾಯಿ, ಚಂದ್ರಶೇಖರ ಪಾಟೀಲ ಮೊದಲಾದವರನ್ನು ಬೆಳೆಸಿದ ಕೀರ್ತಿ ಜಯಂತಿಯದ್ದು.

ರಾಘವೇಂದ್ರ ಪಾಟೀಲರು ಅಭಿಪ್ರಾಯಪಡುವಂತೆ ರಾಜಾಶ್ರಯವಿಲ್ಲದ, ಮರಾಠಿ ಭಾಷೆಯ ದಟ್ಟ ಪ್ರಭಾವದೊಳಗೆ ಸಿಕ್ಕು ಕಸಿವಿಸಿ ಪಡುತ್ತಿದ್ದ ಈ ಭಾಗದಲ್ಲಿನ ಕನ್ನಡ ಪುನರುತ್ಥಾನ ಸೃಜನಶೀಲತೆಯನ್ನು ಕಂಡುಕೊಳ್ಳುವ ಕ್ರಿಯೆ. ಈ ಎಲ್ಲಾ ಸಾಂಸ್ಕೃತಿಕ ವಿಕಾಸದ ಇತಿಹಾಸದಲ್ಲಿ ಜಯಂತಿಯದ್ದು ಅತ್ಯಂತ ಪ್ರಮುಖ ಪಾತ್ರ .

ಕೇವಲ ಪುರುಷರು ಮಾತ್ರವಲ್ಲ ಮಹಿಳೆಯರು ಕನ್ನಡ ಸಾಹಿತ್ಯ ಪತ್ರಿಕೆಯಲ್ಲಿ ದುಡಿದಿದ್ದಾರೆ, ಬೆಳೆದಿದ್ದಾರೆ ಮತ್ತು ಕಟ್ಟಿದ್ದಾರೆ.1917 ರಲ್ಲಿ ನಂಜನಗೂಡು ತಿರುಮಲಾಂಬ ಅವರು ಕರ್ನಾಟಕ ನಂದಿನಿ ಸಾಹಿತ್ಯ ಪತ್ರಿಕೆ ಮತ್ತು ಬೆಂಗಳೂರಿನ ಆರ್. ಕಲ್ಯಾಣಮ್ಮ ಅವರು ಸರಸ್ವತಿ ಎಂಬ ಸಾಹಿತ್ಯ ಪತ್ರಿಕೆ ಆರಂಭಿಸಿದರು.

**ಜೀವನ**

ಕನ್ನಡ ಸಾಹಿತ್ಯದ ಜೊತೆಜೊತೆಗೆ ಸಾಹಿತಿಗಳನ್ನು ಬೆಳೆಸಿದ ಹಿರಿಮೆ ಜೀವನ ಪತ್ರಿಕೆಗೆ ಸಲ್ಲುತ್ತದೆ. ಧಾರಾವಾಡದ ಗೆಳೆಯರ ಬಳಗವು 1939ರಲ್ಲಿ ದ.ರಾ.ಬೇಂದ್ರೆ, ಗೋಕಾಕ್ ಮತ್ತು ರಂ.ಶ್ರೀ.ಮುಗಳಿ ಸಂಪಾದಕತ್ರಯರ ನೇತೃತ್ವದಲ್ಲಿ ಆರಂಭವಾಯಿತು. ಮೂರು

ವರ್ಷದ ನಂತರ ಜೀವನಮಾಸ ಪತ್ರಿಕೆಯು ಮಾಸ್ತಿಯವರ ಮಡಿಲಿಗೆ ಬಂತು. ಹಣದ ಅಭಾವದಿಂದ ಕಂದು ಬಣ್ಣದ ಹಾಳೆಯು ಪತ್ರಿಕೆ ಬಳಕೆಯಾಗುತ್ತಿದ್ದರೂ ಗುಣಮಟ್ಟದಲ್ಲಿ ಎಂದೂ ರಾಜಿಯನ್ನು ಮಾಡಿಕೊಂಡಿಲ್ಲ. ಬೇಂದ್ರೆಗೆ 60 ಆದಾಗ, ವಿಶ್ವೇಶ್ವರಯ್ಯನವರಿಗೆ 90 ಆದ-ಾಗ ವಿಶೇಷ ಸಂಚಿಕೆಯನ್ನು ಹೊರತಂದಿತ್ತು. ಜೀವನ ಗುಣಮಟ್ಟದ ಲೇಖನ ಸಾಹಿತ್ಯದ ಒರೆಗಲ್ಲಾಯಿತು. ನಮ್ಮ ಹಿರಿಯ ಲೇಖಕರು ಅನೇಕ ಮಂದಿಯ ಪ್ರಾರಂಭಿಕ ಬರಹಗಳು ಜೀವನದಲ್ಲಿ ಪ್ರಕಟಗೊಂಡಿವೆ. ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಅವರ ಮೊದಲ ಕವಿತೆ ಪ್ರಕಟವಾಯಿತು. ಹಾಗೆಯೇ ಸರ್ ಎಂ. ಎಕ್ಕುಂಡಿ, ಬಾಗಲೋಡಿ ದೇವರಾಯ, ಎಲ್.ಎಸ್. ಶೇಷಗಿರಿ ರಾವ್, ಯಶವಂತ ಚಿತ್ತಾಲ, ರಾಮಚಂದ್ರ ಶರ್ಮ, ಕೆ.ವಿ.ಸುಬ್ಬಣ್ಣ, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ವ್ಯಾಸರಾಯ ಬಲ್ಲಾಳ, ಟಿ.ವಿ. ವೆಂಕಟಾಚಲಶಾಸ್ತ್ರೀಗಳ ಕೃತಿಗಳು ಜೀವನದಲ್ಲಿ ಮೊದಲು ಪ್ರಕಟವಾಯಿತು ಎಂದು ಹೆಮ್ಮೆಯಿಂದ ನೆನೆಯುತ್ತಾರೆ.

**ಸಾಕ್ಷಿ**

60ರ ದಶಕದಲ್ಲಿ ಸಾಹಿತ್ಯ ಪತ್ರಿಕೆಗಳಾಗಿ ಸಾಕ್ಷಿ ಮತ್ತು ಸಂಕ್ರಮಣ ಬಂತು. 1967ರಲ್ಲಿ ನವ್ಯದ ಹರಿಕಾರರಾದ ಮೊಗೇರಿ ಗೋಪಾಲಕೃಷ್ಣ ಅಡಿಗರು ಸಾಕ್ಷಿಸಂಪಾದಕರಾದರು.ಅಡಿಗರು ಸಾಕ್ಷಿ ಕುರಿತು ಹೀಗೆ ಹೇಳುತ್ತಾರೆ. ಒಟ್ಟಿನಲ್ಲಿ ಕನ್ನಡ ಭಾಷೆಯನ್ನು ಪ್ರೌಢಿಮೆ, ಸೂಕ್ಷ್ಮವೂ, ಗಾಢವೂ ಆದ ವಿಚಾರ ಪ್ರತಿಪಾದನೆಗೆ ತಕ್ಕ ಮಾಧ್ಯಮವನ್ನಾಗಿ ಮಾಡುವ ಪ್ರಯತ್ನಕ್ಕೆ ಈ ಪತ್ರಿಕೆ ಮೀಸಲು. ಸಾಕ್ಷಿಕನ್ನಡ ಸಾಹಿತ್ಯದಲ್ಲಿ ನವ್ಯ ತಲೆಮಾರಿನ ಲೇಖಕರನ್ನು ಸೃಷ್ಟಿಸಿದ ಕೀರ್ತಿಗೆ ಭಾಜನವಾದದ್ದು ಅತಿಶಯವಲ್ಲ. ಕನ್ನಡದಲ್ಲಿ ಉತ್ತಮ ವಿಮರ್ಶೆ ಬರುತ್ತಿಲ್ಲ. ನಿಜವಾಗಿ ವಿಮರ್ಶಾ ಸಾಹಿತ್ಯ ಸರಿಯಾಗಿ ಬೆಳೆಯಲೇ ಇಲ್ಲ. ಇದೊಂದು ದೊಡ್ಡ ಕೊರತೆ.ಸಾಕ್ಷಿ ಸೃಜನಶೀಲ ಕವಿ, ಕಥೆಗಾರನ್ನಷ್ಟೇ ಅಲ್ಲದೆ ಹೊಸ ಪೀಳಿಗೆಯ ನವ್ಯ ವಿಮರ್ಶಕನ್ನೂ ಮತ್ತುನವ್ಯ ವಿಮರ್ಶೆಯ ಮಾನದಂಡವನ್ನು ರೂಪಿಸಿತು ಎಂದು ಹೇಳುತ್ತಾರೆ. ಸಾಕ್ಷಿಕನ್ನಡ ಸಾಹಿತ್ಯದಲ್ಲಿ ನವ್ಯ ಮಾರ್ಗದ ಹೆಗ್ಗುರುತು.

ಸಂಕ್ರಮಣ: 1964ರ ಆಗಸ್ಟ್ ನಲ್ಲಿ ಧಾರವಾಡದಿಂದ ಚಂಪಾ, ಸಿದ್ಧಲಿಂಗ ಪಟ್ಟಣ ಶೆಟ್ಟಿ ಮತ್ತು ಗಿರಡ್ಡಿ ಗೋವಿಂದರಾಜರ ಸಾರಥ್ಯದಲ್ಲಿ ಮೂಡಿಬಂತು. ಉದ್ದೇಶ:- ಸಾಹಿತ್ಯದ ಹೊಸ ದನಿಗೇ ಮಣೆ, ಕಾವ್ಯ, ಕಥೆ, ಲಲಿತ ಪ್ರಬಂಧ, ವಿಮರ್ಶೆಗಳಿಗೆ ಮೀಸಲು ಸಂಕ್ರಮಣ ಎಂಬ ನಿರ್ಣಯ ಕೈಗೊಳ್ಳುತ್ತಾರೆ. ಹೊಸ ಲೇಖಕರನ್ನು ಹೆತ್ತ ಕೀರ್ತಿ ಈ ಪತ್ರಿಕೆಗೆ ಸಲ್ಲುತ್ತದೆ.ಕಾವ್ಯದ ಜೊತೆಗೆ ವಸ್ತುನಿಷ್ಠ ವಿಮರ್ಶೆಗೆ ಆದ್ಯತೆ ನೀಡಿತು. ಸ್ಥಗಿತಕೊಂಡ ನಂತರ 1990ರಲ್ಲಿ ಚಂಪಾ ನೇತೃತ್ವದಲ್ಲಿ ಬೆಂಗಳೂರಿನಿಂದ ಪ್ರಕಟವಾಯಿತು. ಬಂಡಾಯ-ದಲಿತ ಸಾಹಿತ್ಯದಲ್ಲಿ ನಿರ್ಭಿತ ಮನೋಭಾವದ ಹೊಸ ಲೇಖಕರನ್ನು ರೂಪಿಸಿದ ಕೀರ್ತಿ ಇದರದ್ದು. ವರ್ಷಕೊಮ್ಮೆ ಕಾವ್ಯ, ಸಣ್ಣಕಥೆಗಳ ಸ್ಪರ್ಧೆ ನಡೆಸುತ್ತಿದೆ.

ಶೂದ್ರ: ಇಂದಿಗೂ ಪ್ರಕಟವಾಗುತ್ತಿರುವ ಶೂದ್ರ ಪತ್ರಿಕೆ 1973ರಲ್ಲಿ ಎಂ.ಶ್ರೀನಿವಾಸ ನೇತೃತ್ವದಲ್ಲಿ ಆರಂಭವಾಯಿತು. 1973ರಲ್ಲಿ ಮೈಸೂ-ರಿನಲ್ಲಿ ನಡೆದ ಜಾತಿ ವಿನಾಶ ಸಮ್ಮೇಳನವು ಶೂದ್ರದ ಜನ್ಮಕ್ಕೆ ಕಾರಣವಾಯಿತು. ಸಾಹಿತ್ಯ ಚಳವಳಿ, ಪ್ರಗತಿಪರ ಚಳವಳಿಗೆ ಪ್ರೇರಣೆ, ಬೂಸಾ ಪ್ರಕರಣ, ಬಂಡಾಯ ಸಾಹಿತ್ಯ ಚಳವಳಿ, ಜೆ.ಪಿ.ಯ ನವನಿರ್ಮಾಣ ಚಳವಳಿ ಮತ್ತು ಜನಪರ ಚಳವಾಳಿಗೆ ಶೂದ್ರವೇದಿಕೆಯಾಯಿತು.

ರುಜುವಾತು ಡಾ.ಯು.ಆರ್. ಅನಂತಮೂರ್ತಿ ಸಂಪಾದಕತ್ವದಲ್ಲಿ ರುಜುವಾತು ಬಂತು. ರಂಗಭೂಮಿಯ ಖ್ಯಾತಿಯ ಪ್ರಸನ್ನರ ಜೊತೆಗೆಸೃಜನಶೀಲ ಹೊಸ ಪ್ರಯೋಗಗಳು ಮತ್ತು ಹೊಸ ದಿಕ್ಕುಗಳ ಹುಡುಕಾಟದ ತುರ್ತಿನಿಂದ ಪ್ರಾರಂಭವಾಯಿತು.

ದೇಶಕಾಲ: ಕತೆಗಾರ ವಿವೇಕ್ ಶಾನುಭಾಗ ಸಂಪಾದಕತ್ವದಲ್ಲಿ 2005ರಲ್ಲಿ ಆರಂಭ ಮತ್ತು 2012ರಲ್ಲಿ ಅಂತ್ಯ.

ಲಂಕೇಶ್ ಪತ್ರಿಕೆ: 1980ರಲ್ಲಿ ಹೊಸ ಬಗೆಯ ಟ್ಯಾಬ್ಲಾಯ್ಡ್ ಶಕೆ ಆರಂಭ. ಹೊಸ ತಲೆ ಮಾರಿನ ಜಾಣಜಾಣೆಯರ ನೆಚ್ಚಿನ ಪತ್ರಿಕೆಯಾಗಿ ಹೊರಬಂತು. ಕಾಲದ ಅಗತ್ಯ, ಹೊಸ ತಲೆಮಾರಿನ ಬೇಡಿಕೆಗಳನ್ನು ಈಗಾಗಲೇ ಯಶಸ್ಸಿನ ಮದದಲ್ಲಿದ್ದ ಪತ್ರಿಕೆಗಳು ನಿರ್ಲಕ್ಷಿಸಿದಾಗ ಮತ್ತು ನಿಯತಕಾಲಿಕೆಗಳು ಸಂತೃಪ್ತಿ ಮತ್ತು ಅಲಸ್ಯದಿಂದಾಗಿ ಜಡಗಟ್ಟಿದಾಗ ಭರವಸೆಯ ಕಿರಣವಾಗಿ ಲಂಕೇಶ್ ಪತ್ರಿಕೆಯು ಮೊಳಕೆಯೊಡೆಯಿತು.

70-80ರ ದಶಕದಲ್ಲಿ ಕರ್ನಾಟಕದಲ್ಲಿ ಹೊಸ ಅಲೆಯ ನವೀನ ತಲೆಮಾರು ಎದ್ದಿತು. ಮಧ್ಯಮ ವರ್ಗದೊಂದಿಗೆ ದಲಿತರು ಮೊದಲುಗೊಂಡು ಎಲ್ಲಾ ಶೋಷಿತರೂ ಜಾಗೃತಗೊಂಡಿದ್ದರು. ಆತ್ಮಾಭಿವ್ಯಕ್ತಿಗಾಗಿ ಚಡಪಡಿಸುತ್ತಿದ್ದ ಆ ದಿನಗಳು ಹಾಗೆಯೇ ಹೊಸ ಅಲೆಗಳನ್ನು ಅರಿಯಲು ಹೊಸ ತಲೆಮಾರಿನ ಓದುಗರು ತಲೆ ಎತ್ತಿದ್ದರು. ಧೂಮಕೇತುವಿನಂತೆ ಕನ್ನಡ ಪತ್ರಿಕೋದ್ಯಮಕ್ಕೆ ಅಪ್ಪಳಿಸಿದ ಲಂಕೇಶ್ ಮೂಲತ: ಲೇಖಕರು, ಅಧ್ಯಾಪಕರು, ಜನಪ್ರಿಯ ಪತ್ರಿಕೆಯೊಂದರಲ್ಲಿ ಇವರ ಅಂಕಣ ಅರ್ಧಕ್ಕೆ ನಿಂತಾಗ ಅನಿವಾರ್ಯವಾಗಿ ಪತ್ರಿಕೆ ತೆರೆದರು. ಶೋಷಣೆ ವಿರುದ್ಧ ಸಿಡಿದೆದ್ದ ಯುವಪೀಳಿಗೆಗೆ ತಮ್ಮ ಸಿಟ್ಟು, ಸೆಡೆವು,ಆಕ್ರೋಶಗಳ ಅಭಿವ್ಯಕ್ತಿಗೆ ಅವಕಾಶ ನೀಡಿತು. ಪುರೋಹಿತಶಾಹಿ, ಮೂಢನಂಬಿಕೆ, ಭ್ರಷ್ಟಾಚಾರಿಕಗಳ ಜನ್ಮ ಜಾಲಾಡುವ ಕೆಲಸ ಮಾಡಿತು. ಮುಖ್ಯವಾಗಿ ಇರಿಯವ ಭಾಷೆಯ ಪ್ರಯೋಗವನ್ನು ನಡೆಸಿತು. ವ್ಯವಸ್ಥೆಯ ಮೇಲಿದ್ದ ಜನತೆಯ ಸಿಟ್ಟು ಮತ್ತು ಆಕ್ರೋಶಗಳಿಗೆ ಹೊಸ ಅಭಿವ್ಯಕ್ತಿಯ ಮಾಧ್ಯಮವಾಯಿತು. ರೈತ ಚಳವಳಿ, ಕನ್ನಡ ಚಳವಳಿಯ ಮಾರ್ಗದರ್ಶಕವಾಯಿತು. ಶ್ರೀಸಾಮಾನ್ಯರ ಅಸಹನೆಗಳಿಗೆ ಮುಖಪುಟವಾಯಿತು.

ಜನಸಾಮಾನ್ಯರ ಭಾಷೆಯಲ್ಲೇ ಅಭಿವ್ಯಕ್ತಿ ಪಡೆಯಿತು. ಪ್ರಿನ್ಸಿಪಾಲರಿಗೆ ಗೂಸಾ, ಇನ್ಸ್‌ಪೆಕ್ಟರ್ ಗೆ ಇಕ್ಕಿದರು, ಲಾಯರ್ ಗೆ ಲಾತ, ಇವು ಜನಸಾಮಾನ್ಯರ ಒಳಗೆ ಕುದಿಯುತ್ತಿದ್ದ ಮಾತುಗಳೇ ಆಗಿರುತ್ತಿದ್ದವು. ಈ ಭಾಷೆ ಓದುಗರ ಸುಪ್ತ ಬಯಕೆಗಳನ್ನು ತಣಿಸುತ್ತಿತ್ತು. ಅಂದಿನ ಪತ್ರಿಕೆಗಳು ಶೋಷಿತರ ಮತ್ತು ದಲಿತರ ಪರವಾಗಿರಲಿಲ್ಲ. ಅನ್ಯಾಯದ ವಿರುದ್ಧ ಎಲ್ಲಾ ಸ್ಥಾಪಿತ ಪತ್ರಿಕೆಗಳೂ ಮೂಕರಾಗಿದ್ದರು.

ಹೊಸ ಪ್ರಯೋಗ: ದಲಿತರು, ಶೋಷಿತರು, ಅಲ್ಪಸಂಖ್ಯಾತರುಗಳಲ್ಲಿ ಬರೆಯುವ ಸಾಮರ್ಥ್ಯವುಳ್ಳ ಹೊಸ ತಲೆಮಾರಿನ ಪ್ರತಿಭಾನ್ವಿತರಿಗೆ ಬರೆಯಲು ಅವಕಾಶ ಮಾಡಿಕೊಟ್ಟಿತು. ಮಹಿಳೆಯರೂ ಸೇರಿದಂತೆ ತಮ್ಮದೇ ಆದ ಬಹು ದೊಡ್ಡ ಲೇಖಕರ ಬಳಗವನ್ನು ಸೃಷ್ಟಿಸಿತು. ಮುಸ್ಲಿಂ ಸ್ತ್ರೀಸಂವೇದನೆಯ ಮೂಲಕ ಸ.ರಾ.ಅಬೂಬ್ಕರ್, ಭಾನು ಮುಸ್ತಾಕ್, ಇನ್ನಿತರ ಲೇಖಕಿಯರು ಬಂದರು. ಜಾಹೀರಾತು ಹಂಗಿಲ್ಲದೆ ಬದುಕಿದ ಪತ್ರಿಕೆ.

ಪ್ರಜಾಮತ: 1931ರ ಆಗಸ್ಟ್ 8ರಂದು ಬಿ.ಎನ್. ಗುಪ್ತರ ಸಂಪಾದಕತ್ವದಲ್ಲಿ ಆರಂಭವಾದ ಪತ್ರಿಕೆ ಸುಮಾರು 60ವರ್ಷಗಳ ಧೀರ್ಘ ಅವಧಿಯನ್ನು ಪೊರೈಸಿತ್ತು.1945ರಲ್ಲಿ ಪ್ರಜಾಮತ ದೀಪಾವಳಿ ವಿಶೇಷಾಂಕದ ಸಂಪಾದಕರಾಗಿದ್ದ ಖ್ಯಾತ ಕಾದಂಬರಿಕಾರರಾದ ನಿರಂಜನರು ಹೀಗೆ ಬರೆಯುತ್ತಾರೆ. ವಿಶೇಷಾಂಕದ ಬರಹಗಾರರಿಗೆಲ್ಲಾ ಸಂಭಾವನೆ ನೀಡಿದ ಪ್ರಥಮ ಪತ್ರಿಕೆ ಇದು. ಖ್ಯಾತನಾಮರಿಗೆ 20ರೂಪಾಯಿ, ಎರಡನೇಯವರಿಗೆ 15ರೂ, ಹಾಗೂ ಉಳಿದವರಿಗೆ 10ರೂ ನೀಡಲಾಯಿತು.

ಮಯೂರ: ಪ್ರಜಾವಾಣಿ ಸಹೋದರ ಪತ್ರಿಕೆಯಾಗಿ ಎಂ.ಬಿ. ಸಿಂಗ್ ಸಂಪಾದಕತ್ವದಲ್ಲಿ ಪ್ರಬುದ್ಧ ಓದುಗರನ್ನು ಗಮನದಲ್ಲಿಟ್ಟುಕೊಂಡು 1968ರಲ್ಲಿ ಆರಂಭವಾಯಿತು. ಮುಖ್ಯವಾಗಿ ಕಥಾ ಪ್ರಧಾನವಾದ ಸದಭಿರುಚಿಯ ಮಾಸ ಪತ್ರಿಕೆಯಾಗಿ ಬಂತು. ಬುದ್ಧಿ-ಭಾವಗಳ

ಸಂಗಮವಾಗಿ ಹೊರಬಂತು. ಹೊಸ ಸಂವೇದನೆಯ ಕಥೆಗಳಿಗೆ, ಜಗತ್ತಿನ ಪ್ರಸಿದ್ಧ ಕಥೆಗಳಿಗೆ, ಹೊಸ ಕಥೆಗಾರರಿಗೆ ವಿಫುಲ ಅವಕಾಶ ನೀಡಿತು. ತುಷಾರ 1993ರಲಿ ಇದೇ ಮಾದರಿಯಲ್ಲಿ ಬಂತು. 1956ರಲ್ಲಿ ಲೋಕ ಶಿಕ್ಷಣ ಟ್ರಸ್ಟ್ ಆಶ್ರಯದಲ್ಲಿ ಇಂಗ್ಲಿಷಿನ ರೀಡರ್ಸ ಡೈಜೆಸ್ಟ್ ಮಾದರಿಯನ್ನು ಇಟ್ಟುಕೊಂಡು ಕಸ್ತೂರಿ ಮೂಡಿಬಂತು. ಅನಂತರ ಉತ್ಥಾನ ಬಂತು.

ಮಲ್ಲಿಗೆ: 1962ರಲ್ಲಿ ಬಿ.ಎನ್. ಗುಪ್ತ ಅವರ ಸಂಪಾದಕತ್ವದಲ್ಲಿ ಮಲ್ಲಿಗೆಆರಂಭವಾಯಿತು. ಕಥಾ ಪ್ರಧಾನ ಪತ್ರಿಕೆಯಾಗಿ ಮತ್ತು ಜಗತ್ತಿನ ಶ್ರೇಷ್ಠ ಸಾಹಿತಿಗಳನ್ನು ಕನ್ನಡಕ್ಕೆ ಕರೆತಂದ ಹಿರಿಮೆ-ಗರಿಮೆ ಇದರದ್ದು. ಹೊಸ ಸಂವೇದನೆಯ ಕಥೆಗಳು ಪ್ರಕಟವಾದವು.

ಸುಧಾ: ಪ್ರಜಾವಾಣಿ ಸೋದರ ಪತ್ರಿಕೆಯಾಗಿ 1965ರಲ್ಲಿ ಸುಧಾ ವಾರಪತ್ರಿಕೆಯು ಇ.ಆರ್. ಸೇತೂರಾಂ ಸಂಪಾದಕತ್ವದಲ್ಲಿ ಬಂತು. ಕನ್ನಡದ ಹಳೆಯ ತಲೆಮಾರು ಹಾಗೂ ಹೊಸತಲೆಮಾರಿನ ಬಹುತೇಕ ಸಾಹಿತಿಗಳು ಇಲ್ಲಿ ಬರೆದರು. ಸುಧಾ ವಾರಪತ್ರಿಕೆಯ ಪ್ರಾಣವಾಯು ಎಂದರೆ ಅದು ಮಹಿಳೆಯರು. ಮಕ್ಕಳು ಶಾಲೆಗೆ, ಗಂಡ ಕಛೇರಿಗೆ ತೆರಳಿದ ನಂತರ ಮನೆಗೆಲಸ ಮುಗಿಸಿದ ನಂತರದ ಮಧ್ಯಾಹ್ನ 2ರಿಂದ 5ಗಂಟೆಯವರೆಗಿನ ಸಂಗಾತಿ. ಸುಧಾ ವಾರಪತ್ರಿಕೆಯು ಜನಪ್ರಿಯ ಕಾದಂಬರಿ ಸಾಹಿತ್ಯಕ್ಕೆ ಮಣೆ ಹಾಕಿತು. ಟಿ.ಕೆ. ರಾಮ್ ರಾವ್, ಉಷಾ ನವರತ್ನ ರಾಂ, ಕೆ.ಟಿ.ಗಟ್ಟಿ, ಶಾರದೆ, ವಿಜಯ ಸಾಸನೂರು, ಸುದರ್ಶನ ದೇಸಾಯಿ, ಎಚ್.ಕೆ. ಅನಂತ ರಾವ್ ಮುಂತಾದವರು ಬೆಳೆದರು. ಪ್ರಗತಿಶೀಲ ಚಳವಳಿಯ ನಂತರ ಜನಪ್ರಿಯ ಕಾದಂಬರಿಗೆ ಮತ್ತೆ ಸಂಚಲನ ಕೊಟ್ಟಿದ್ದು ಸುಧಾ. ದೇವನೂರು ಮಹಾದೇವ ಮತ್ತು ಆಲನಹಳ್ಳಿ ಕೃಷ್ಣ ಮುಂತಾದ ಮಹತ್ವದ ಲೇಖರ ಸಾಹಿತ್ಯ ಪ್ರಕಟಗೊಂಡವು. ಸುಧಾ ವಾರಪತ್ರಿಕೆಯಲ್ಲಿ ಉಪಸಂಪಾದಕನಾಗಿ ನಾನು ಕೆಲಸ ಮಾಡುವ ಅವಕಾಶ ಸಿಕ್ಕದ್ದು ನನ್ನ ಅದೃಷ್ಟವೇ ಸರಿ. ಇಲ್ಲಿನ ಕಥೆ, ಕಾದಂಬರಿ, ಕಾವ್ಯಗಳ ಆಯ್ಕೆ ಪ್ರಕ್ರಿಯೆ ಮತ್ತು ವಿಮರ್ಶೆ, ಪುಸ್ತಕ ಪ್ರೀತಿ, ಕಿರುತೆರೆ-ಹಿರಿತೆರೆಗಳ ವಿಭಾಗಗಳಲ್ಲಿ ಕೆಲಸ ಮಾಡಿದೆ. 2008ರ ಸಾಲಿನ ಅತ್ಯುತ್ತಮ ಮಾನವೀಯ ವರದಿಗಾಗಿ ಕರ್ನಾಟಕ ಸರ್ಕಾರದ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಬಂದಿತು. ಜೊತೆಗೆ ಮೈಸೂರು ಆಕಾಶವಾಣಿಯಲ್ಲಿ ತಾತ್ಕಲಿಕ ಉದ್ಘೋಷನಾಗಿ ಕಾರ್ಯನಿರ್ವಹಿದೆ.

ಕರ್ಮವೀರ: 1921ರಲ್ಲಿ ಫೆಬ್ರವರಿ 21ರಂದು ಲೋಕಶಿಕ್ಷಣ ಟ್ರಸ್ಟ್ ವತಿಯಿಂದ ಉತ್ತರ ಕರ್ನಾಟಕದಲ್ಲಿ ಸಾಹಿತ್ಯ, ಸಂಸ್ಕೃತಿ, ವಿಮರ್ಶೆ, ಸೃಜನಶೀಲತೆಗೆ ವೇದಿಕೆ ಕಲ್ಪಿಸಿತು. ದ.ರಾ.ಬೇಂದ್ರೆ, ಪ್ರಹ್ಲಾದ್, ಶಂ.ಭಾ.ಜೋಶಿ, ಮಧುರ ಚೆನ್ನ, ರಂ.ಶ್ರೀ. ಮುಗಳಿ, ಆನಂದ ಕಂದ, ಮಾಳವಾಡ ದಂಪತಿ, ಕಲ್ಲೂರ, ಕಣವಿ ಅಲ್ಲದೆ ನವ್ಯದ ಚಂಪಾ, ಕಂಬಾರ, ಪಟ್ಟಣ ಶೆಟ್ಟಿ, ಗಿರಡ್ಡಿ, ಅಮೂರ, ಶಂಕರ ಮೊಕಾಶಿ ಪುಣೇಕರ್, ವೀಣಾ ಶಾಂತೇಶ್ವರ್ ರಂತಹ ಹೊಸ ಪೀಳಿಗೆ ಬಂತು.

ತರಂಗ: ಸುಧಾ ವಾರಪತ್ರಿಕೆಯ ನಂಬರ್ 1 ಸ್ಥಾನವನ್ನು ಮುರಿಯಲು 1983ರ ಜನವರಿಯಲ್ಲಿ ಸಂತೋಷ್ ಕುಮಾರ್ ಗುಲ್ವಾಡಿ ಸಂಪಾದಕತ್ವದಲ್ಲಿ ಮಣಿಪಾಲ್ ಮೀಡಿಯದವರು ಆರಂಭಿಸಿದರು. ಸಣ್ಣ ಕಥೆ, ಕಾದಂಬರಿ, ನಾಟಕ, ಲಲಿತ ಪ್ರಬಂಧ ಮತ್ತು ಸಾಹಿತ್ಯ ಬರಹಗಳು ಮೂಡಿ ಬಂದವು.

ಹಾಸ್ಯ ಪ್ರಧಾನ ಪತ್ರಿಕೆಗಳು: 1907ರಲ್ಲಿ ವಿಕಟ ಪ್ರತಾಪವು ಚೆನ್ನಕೇಶವ ಅಯ್ಯಂಗಾರ್ ಸಂಪಾದಕತ್ವದಲ್ಲಿ ಬಂತು, 1911ರಲ್ಲಿ ವಿಕಟ ವಿನೋದಿನಿ ಬಿ.ಶಿವಪ್ಪ ಸಂಪಾದಕತ್ವದಲ್ಲಿ ಮತ್ತು 1932ರಲ್ಲಿ ನಗುವ ನಂದನವು ಸುಭೋಧ ರಾಮರಾಯರ ನೇತೃತ್ವದಲ್ಲಿ ಬಂತು. ಇಂಗ್ಲಿಷಿನ ಪಂಚ್ ಪತ್ರಿಕೆಯಿಂದ ಪ್ರೇರಿತರಾದ ರಾಶಿಯವರು ಕನ್ನಡದಲ್ಲಿ ಹಾಸ್ಯ ಪ್ರಧಾನ ಕೊರವಂಜಿಪತ್ರಿಕೆಯನ್ನು ಆರಂಭಿಸಿದರು. ಕೊರವಂಜಿಯು ಸದಭಿರುಚಿಯ ಪ್ರೌಢ ಹಾಸ್ಯ ಪತ್ರಿಕೆ. ಜಿ.ಪಿ. ರಾಜರತ್ನಂ, ಅರಾಸೇ, ಕೇಫ, ನಾ.ಕಸ್ತೂರಿ, ಕಾರಂತ, ಶ್ರೀರಂಗ ಹೀಗೆ ಹೊಸ ಪೀಳಿಗೆಯ ಪಟ್ಟಿ ಬೆಳೆಯುತ್ತಾ ಹೋಯಿತು. ಪ್ರಜಾವಾಣಿ ದಿನಪತ್ರಿಕೆಯ ಛೂ ಬಾಣದ ಖ್ಯಾತಿಯ ಟಿ.ಎಸ್.ರಾಮಚಂದ್ರರಾಯರು ತಮ್ಮ ಬರವಣಿಗೆಯನ್ನು ಆರಂಭಿಸಿದ್ದು ಕೊರವಂಜಿಯ ಮೂಲಕ, ಹಾಗೆಯೇ ಖ್ಯಾತ ವ್ಯಂಗ್ಯ ಚಿತ್ರಕಾರರಾದ ಆರ್.ಮೂರ್ತಿ, ಆರ್.ಕೆ. ಲಕ್ಷ್ಮಣ್ ಕೊರವಂಜಿಯ ವ್ಯಂಗ್ಯ ಚಿತ್ರಕಾರರಾಗಿ ದುಡಿದಿದ್ದಾರೆ. ವಿನೋದ ಪತ್ರಿಕೆಯು ದೇಶಹಳ್ಳಿ ಜಿ. ನಾರಾಯಣ ಸಂಪಾದಕತ್ವದಲ್ಲಿ 1951ರಲ್ಲಿ ಬಂತು ಆರಂಭದ ಬೆಲೆ ಎರಡಾಣೆ, ಗಾಂಧಿ ಟೋಪಿ ಧರಿಸಿದ ಸೊಂಡಿಲ ಗಣಪ ವಿನೋದ ಪತ್ರಿಕೆಯ ಲಾಂಛನ. ಇದು ರಾಜಕೀಯ ಪುಢಾರಿಯನ್ನು ಒಂದುಬಾರಿ ಮತ್ತೊಂದು ಬಾರಿ ಶ್ರೀಸಾಮಾನ್ಯರನ್ನು ಪ್ರತಿನಿಧಿಸುತ್ತಿತ್ತು.

**ವಿಶೇಷಾಂಕಗಳು**

20ನೇ ಶತಮಾನದ ಆರಂಭದಲ್ಲಿ ಭಾರತೀಯ ಪತ್ರಿಕೆಗಳು ಹಬ್ಬ ಹರಿದಿನದ ನೆಪಮಾಡಿಕೊಂಡು ವರ್ಷಕೊಮ್ಮೆಯಾದರೂ ವಿಶೇಷಾಂಕಗಳನ್ನು ಹೊರತರುವ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದವು. ವಿಜಯದಶಮಿ, ದುರ್ಗಾಷ್ಟಮಿ, ಯುಗಾದಿ, ಸಂಕ್ರಾಂತಿ, ದೀಪಾವಳಿ ವಿಶೇಷಾಂಕಗಳನ್ನು ಹೊರತಂದು ಸಾಹಿತ್ಯ-ಸಂಸ್ಕೃತಿಯನ್ನ ಪ್ರಸಾರ ಮಾಡಿದವು.

ಹೊಸ ಪ್ರತಿಭೆಗಳನ್ನು , ವಿಮರ್ಶಕರನ್ನು, ವಿದ್ವಜ್ಜನರನ್ನು ಗುರುತಿಸಿ ಲೇಖನ-ಕಥೆ-ಕಾವ್ಯ -ನಾಟಕ ಬರೆಸುವ ಕೆಲಸ ಮಾಡಿತು. ಕೈತುಂಬಾ ಸಂಭಾವನೆ ನೀಡಿದವು. ವಿಶೇಷಾಂಕವೆಂದರೆ ಸಾಹಿತ್ಯದ ಸುಗ್ಗಿ, ಹಳೆಯ ತಲೆಮಾರಿನ ಲೇಖಕರು ಮತ್ತು ಹೊಸ ತಲೆಮಾರಿನ ಲೇಖಕರನ್ನು ಅಪೂರ್ವ ಸಮ್ಮಿಲನದ ವೇದಿಕೆಯಾಗಿತ್ತು. ಸಣ್ಣ ಕಥಾ ಸ್ಪರ್ಧೆ, ನಾಟಕ ಸ್ಪರ್ಧೆ, ಕಾವ್ಯ ಸ್ಪರ್ಧೆ ಮತ್ತು ಲಲಿತ ಪ್ರಬಂಧ ಸ್ಪರ್ಧೆಗಳನ್ನು ಆಯೋಜಿಸಿ ಹೊಸ ತಲೆಮಾರಿನ ಲೇಖಕರಿಗೆ ವಿಫುಲ ಅವಕಾಶ ನೀಡಿದವು. ಈ ಸ್ಪರ್ಧೆಗಳು ತಮ್ಮ ಸೃಜನಶೀಲ ಪ್ರತಿಭೆಯ ಅಭಿವ್ಯಕ್ತಿಗೆ ವೇದಿಕೆಯ ಜೊತೆಗೆ ಚಿಮ್ಮುವ ಹಲಗೆ ಯಾಗುತ್ತಿತ್ತು. ಖ್ಯಾತನಾಮರಾದಅನಂತಮೂರ್ತಿ, ರಾಮಚಂದ್ರ ಶರ್ಮಾ, ತೇಜಸ್ವಿ, ಲಂಕೇಶ್, ಕೆ.ಸದಾಶಿವ, ಟಿ.ಜಿ.ರಾಘವ, ಟಿ.ಎನ್. ಸೀತಾರಾಮ್ ಹಾಗೆಯೇ ದಲಿತ ಬಂಡಾಯದ ಮೊಗಳ್ಳಿ ಗಣೇಶ್, ಅಮರೇಶ ನುಗಡೋಣಿ, ಅಬ್ದುಲ್ ರಶೀದ್ ಮೊದಲಾದವರು ಪ್ರಜಾವಾಣಿ ದೀಪಾವಳಿ ಕಥಾ ಸ್ಪರ್ಧೆಯಿಂದ ಸಾಹಿತ್ಯ ಕ್ಷೇತ್ರಕ್ಕೆ ಬಂದವರು.

ಸಾಹಿತ್ಯ ಪತ್ರಿಕೆಗಳ ಓದುಗರ ಬ್ಯಾಂಕ್ ಎನಿಸಿಕೊಂಡಿದ್ದ ಮಹಿಳಾ ಓದುಗ ವರ್ಗ ಟಿ.ವಿ. ಧಾರಾವಾಹಿಗಳ ಕಡೆ ಮುಖಮಾಡಿದ್ದು. ಕಥೆ-ಕಾದಂಬರಿಯ ಕಲ್ಪನಾ ಲೋಕಕ್ಕಿಂತ ಝಗಮಗಿಸುವ ಪಾತ್ರಧಾರಿಗಳು ಧಾರಾವಾಹಿಗಳ ಮೂಲಕ ಕಣ್ಣಮುಂದೆ ಬಂದದ್ದು ಮುಖ್ಯ ಕಾರಣ. ಮಾಮೂಲಿ ದಿನಪತ್ರಿಕೆಗಳು ಪ್ರತಿದಿನ ಪುರವಣಿಗಳನ್ನು ನೀಡುತ್ತಿರುವುದು ಬಹುಮುಖ್ಯ ಕಾರಣ. ಒಂದು ಕಾಲದಲ್ಲಿ ಪ್ರತಿಮನೆಯ ಟೀಪಾಯಿಯ ಮೇಲೆ ಕೆಳಗೆ ಸುಧಾ, ತರಂಗ, ಕರ್ಮವೀರ, ಮಯೂರ, ತುಷಾರ ಮುಂತಾದ ಸಾಹಿತ್ಯ ಪತ್ರಿಕೆಗಳು ಇದ್ದವು. ಆದರೆ ಈಗ ಕಾಲ ಬದಲಾಗಿದೆ. ಮೂರ್ಖರ ಪೆಟ್ಟಿಗೆಯಾಗಿ ಟಿವಿ ಬಂದು ಪ್ರತಿಮನೆಯ ಮೂಲೆಯನ್ನು ಅಲಂಕರಿಸಿದೆ. ಡಿವಿಡಿಗಳು ಮತ್ತು ಸಿಡಿಗಳು ಕಾಮಧೇನು ಕಲ್ಪವೃಕ್ಷಗಳಾಗಿವೆ. ಆದರೂ ಅಂತರ್ಜಾಲದಲ್ಲಿ ಕನ್ನಡ ಸಾಹಿತ್ಯ ಪತ್ರಿಕೆಗಳು ಬರುತ್ತಿವೆ.